www.ecourtsindia.com

**OS.No.487/2013**
**PW-1**

ಸಾಕ್ಷಿಯನ್ನು ಇಂದು ದಿನಾಂಕ 02-11-2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

## ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಹೆಚ್.ಎಮ್.ಎಫ್. ವಕೀಲರಿಂದ :-

ದಾವೆಯನ್ನು ಈ ಮುಂಚೆ ನನ್ನ ತಾಯಿ ಸಲ್ಲಿಸಿದ್ದರು. ಸದರಿ ದಾವೆಯನ್ನು ನನ್ನ ತಾಯಿ ದಾವಾ ಆಸ್ತಿಯ ಸಲುವಾಗಿ ಸಲ್ಲಿಸಿದ್ದರು. ದಾವಾ ಆಸ್ತಿಯ ಪೂರ್ಣ ಮಾಹಿತಿ ನನಗೆ ಗೊತ್ತು. ದಾವಾ ಆಸ್ತಿಯನ್ನು ನನ್ನ ತಾಯಿ 1994 ರ ಕ್ರಯದ ಕರಾರು ಪತ್ರ ಮಾಡಿಕೊಂಡು ತದನಂತರ ಕ್ರಯಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೆ. ಸದರಿ ಕ್ರಯದ ಕರಾರು ಪತ್ರದಲ್ಲಿ ಆಸ್ತಿಯ ಡೋರ್ ನಂ.97, ಟಿ.ಎಸ್. ನಂ.773 ಎಂದು ನಮೂದು ಇತ್ತು ಎಂದರೆ ಸರಿ.

ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ ಸಂಬಂಧಪಟ್ಟ ರೆವೆನ್ಯೂ ದಾಖಲೆಗಳಲ್ಲಿ ನನ್ನ ತಾಯಿಯ ಹೆಸರು ಹಕ್ಕು ಬದಲಾವಣೆ ಆದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಾಯಿಯ ಹೆಸರು ನಮೂದು ಆಗದ ಬಗ್ಗೆ ಎ.ಡಿ.ಎಲ್.ಆರ್. ಕಛೇರಿಯಲ್ಲಿ ವಿಚಾರಣೆ ಮಾಡಿದ್ದು, ಅವರು ವರದಿ ನೀಡಿರುತ್ತಾರೆ. ಆ ವರದಿಯಲ್ಲಿ ಏನು ನಮೂದು ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ದಾವಾ ಆಸ್ತಿಗೆ ಸಂಬಂಧಿಸಿದಂತೆ ಸಂಬಂಧ ಪಟ್ಟ ದಾಖಲೆಗಳಲ್ಲಿ ಹಕ್ಕು ಬದಲಾವಣೆ ಆಗಿಲ್ಲ ಎಂದರೆ ಸರಿ.

ದಾವಾ ಆಸ್ತಿಯ ಸ್ವಾಧೀನತೆಯನ್ನು ತೋರಿಸಲು ದಾಖಲಾತಿಗಳನ್ನು ನನ್ನ ತಾಯಿ ಹಾಜರು ಪಡಿಸಿರುತ್ತಾರೆ.

ಪ್ರತಿವಾದಿ ನನಗೆ ಗೊತ್ತಿಲ್ಲ. ದಾವೆಯಲ್ಲಿ ನನ್ನ ತಾಯಿ ದಾವಾ ಆಸ್ತಿಯ ಪರೀವಿಕ್ಷಣೆಗೆ ಕೋರ್ಟ್ ಕಮೀಷನರ್ ನೇಮಿಸಲು ಅರ್ಜಿ ಸಲ್ಲಿಸಿದ ವಿಷಯ ನನಗೆ ಗೊತ್ತಿಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABI030017212013/truecopy/order-3.pdf

ಪ್ರತಿವಾದಿ ಟಿ.ಎಸ್. ನಂ.769/2ಬಿ ಮತ್ತು ಟಿ.ಎಸ್. ನಂ.770/2ಬಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಪ್ರತಿವಾದಿ ನಮ್ಮ ಪಕ್ಕದ ಮನೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಾಲ್ಕು ಛಾಯಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಛಾಯಚಿತ್ರದಲ್ಲಿರುವ ಅಂಗಡಿ ಪ್ರತಿವಾದಿಯ ಅಂಗಡಿ ಎಂದು ಗುರುತಿಸಿದ್ದು ಸದರಿ ಛಾಯಚಿತ್ರಗಳನ್ನು ನಿಡಿಃ 1 ರಿಂದ 4 ಎಂದು ಗುರುತಿಸಲಾಯಿತು. ಸದರಿ ಅಂಗಡಿಯ ಬಲಭಾಗಕ್ಕೆ ನಮ್ಮ ಮನೆ ಇರುತ್ತದೆ. ಸದರಿ ಮನೆಯಲ್ಲಿ ನಾವೇ ವಾಸವಾಗಿದ್ದೇವೆ. ನಮಗೆ ಸೇರಿದ ಆಸ್ತಿಯಲ್ಲಿ ಪ್ರತಿವಾದಿಯು ಯಾವಾಗಲೂ ಬಂದಿಲ್ಲ ಎಂದರೆ ಸರಿ.

ಪ್ರತಿವಾದಿ ಟಿ.ಎಸ್.ನಂ.769/ಬಿ/2 ಮತ್ತು 770/ಬಿ/2 ಈ ಆಸ್ತಿಗಳಲ್ಲಿ ಅಂಗಡಿ ನಡೆಸುತ್ತಿದ್ದಾರೆ ಎಂದರೆ ಸರಿ.

ಟಿ.ಎಸ್. ನಂ.773 ಆಸ್ತಿಯಲ್ಲಿ ಯಾರು ಸ್ವಾಧೀನದಲ್ಲಿದ್ದಾರೆ ಎಂಬ ನ್ಯಾಯಾಲಯದ ಪ್ರಶ್ನೆಗೆ ಲಕ್ಷ್ಮಿದೇವಿರವರು ಸ್ವಾಧೀನದಲ್ಲಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ.

ನನ್ನ ತಾಯಿ ದಾವೆ ಸಲ್ಲಿಸಿದ್ದರಿಂದ ದಾವೆಯ ಬಗ್ಗೆ ನನಗೆ ಏನೂ ಗೊತ್ತಿಲ್ಲದಿದ್ದರೂ ದಾವಾ ಆಸ್ತಿಯ ಬಗ್ಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ.ಸರಿ ಇದೆ.

**5ನೇ ಹೆಚ್ಚುವರಿ ಸಿವಿಲ್ ಮತ್ತು**
**ಜೆ.ಎಮ್.ಎಫ್.ಸಿ. ನ್ಯಾಯಾಧೀಶರು, ಬಳ್ಳಾರಿ.**

This is a True Copy of the Court Records Online. Authenticated @ districts.ecourtsindia.com/cnr/KABI030017212013/truecopy/order-3.pdf